# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಬಿಜಿಎಂ-2941/2013/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 31/03/2017

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

ವಿಷಯ: ಶ್ರೀ ಪ್ರೇಮ್ ಚಂದ್ ಮೋತಿಚಂದ್ ಲೇಂಗ್ಡೆ, ತಿಲಕವಾಡಿ, ಬೆಳಗಾವಿ, ಬೆಳಗಾವಿ ಜಿಲ್ಲೆ ಇವರು ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

*-*-*

ಪ್ರಕರಣದ ದೂರುದಾರರಾದ ಶ್ರೀ ಪ್ರೇಮ್ ಚಂದ್ ಮೋತಿಚಂದ್ ಲೇಂಗ್ಡೆ ಇವರು ಈ ಸಂಸ್ಥೆಗೆ ದೂರೊಂದನ್ನು ಸಲ್ಲಿಸಿ, ಖಾನಾಪುರ ರಸ್ತೆಯ ತಿಲಕವಾಡಿ ಗ್ರಾಮದ ಸರ್ವೇ ನಂಬರ್ 199/ಅ/2ಎ/2 ಜಮೀನಿಗೆ ಸಂಬಂಧಿಸಿದಂತೆ ದಿ:12/10/2012 ರಂದು ಎದುರುದಾರರಿಗೆ ಅರ್ಜಿಯನ್ನು ನೀಡಿ ತಮ್ಮ ಜಮೀನಿನ ಖಾತೆಯನ್ನು ಬದಲಾವಣೆ ಮಾಡಿಕೊಡಬೇಕೆಂದು ಕೋರಿದ್ದು, 1ನೇ ಎದುರುದಾರರಾದ ತಹಶೀಲ್ದಾರ್‌ರವರು ತಮ್ಮ ಕೋರಿಕೆಯನ್ನು ತಿರಸ್ಕರಿಸಿರುತ್ತಾರೆ. ಸದರಿ ಆದೇಶದ ವಿರುದ್ಧ ಅಸಿಸ್ಟೆಂಟ್ ಕಮೀಷನರ್ ಇವರ ಮುಂದೆ ಮೇಲ್ಮನವಿಯನ್ನು ಸಲ್ಲಿಸಿದ್ದು, 2ನೇ ಎದುರುದಾರರು ಮೇಲ್ಮನವಿಯನ್ನು ಪುರಸ್ಕರಿಸಿ 1ನೇ ಎದುರುದಾರರಿಗೆ ದೂರುದಾರರ ಅರ್ಜಿಯ ಮೇಲೆ ನ್ಯಾಯಯುತ ಕ್ರಮ ಜರುಗಿಸುವಂತೆ ಆದೇಶಿಸಿರುತ್ತಾರೆಂದು, ಆದರೂ ಸಹ 1ನೇ ಎದುರುದಾರರು ಯಾವುದೇ ಸೂಕ್ತ ಕ್ರಮ ಜರುಗಿಸಿಲ್ಲವೆಂದು, ಆದ್ದರಿಂದ, ಈ ಬಗ್ಗೆ ಎದುರುದಾರರ ವಿರುದ್ಧ ಕ್ರಮ ಜರುಗಿಸಿ ತನಗೆ ಸೂಕ್ತ ಪರಿಹಾರ ಕೊಡಿಸಿಕೊಡಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಸದರಿ ದೂರಿನ ಆಧಾರದ ಮೇಲೆ ಎದುರುದಾರರ ಆಕ್ಷೇಪಣೆಯನ್ನು ಕರೆಯಲಾಗಿದ್ದು, 1ನೇ ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ. 1ನೇ ಎದುರುದಾರರು ತಮ್ಮ ದಿ:09/05/2014 ರ ಪತ್ರದಲ್ಲಿ ದೂರುದಾರರು ನೀಡಿದ್ದ ಅರ್ಜಿಯನ್ನು ಭೂಮಿ ಕಿಯಾಸ್ಕ ಇದರಲ್ಲಿ ನೋಂದಾಯಿಸಿ

ಅರ್ಜಿಯ ನಂಬರ್ ಅನ್ನು ನೀಡಿ 7035 ನಂಬರಿನ ಹಿಂಬರಹವನ್ನು ನೀಡಲಾಗಿರುತ್ತದೆ. ನಂತರ ದೂರುದಾರರ ಅರ್ಜಿಯ ಬಗ್ಗೆ ವಿಚಾರಣೆ ನಡೆಸಿ ಸೂಕ್ತ ಕ್ರಮ ಜರುಗಿಸಲಾಗುವುದೆಂದು ತಿಳಿಸಿರುತ್ತಾರೆ. ನಂತರ 1ನೇ ಎದುರುದಾರರು ಈ ಸಂಸ್ಥೆಗೆ ಪತ್ರ ಬರೆದು, ಅದರಲ್ಲಿ ತಾವು ಈ ಪ್ರಕರಣದ ದೂರುದಾರರನ್ನು ಸಂಪರ್ಕಿಸಿ ಅವರ ದೂರಿನ ಬಗ್ಗೆ ವಿಚಾರಿಸಲಾಗಿ, ದೂರುದಾರರು ಅನಗೋಳ ಗ್ರಾಮದ ಸರ್ವೇನಂಬರ್ 699/ಎ/2/2ರ ಜಮೀನಿನ ವಾರಸನಾಥೆಯಿಂದ ಹಕ್ಕು ಬದಲಾವಣೆ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಕಿಯೋಸ್ಕದಲ್ಲಿ ಸ್ವೀಕರಿಸದ ಕಾರಣ, ಪ್ರಸ್ತುತ ದೂರನ್ನು ಸಲ್ಲಿಸಲಾಗಿರುತ್ತದೆ. ಸದರಿ ಸಮಯದಲ್ಲಿ ಅರ್ಜಿದಾರರು ತನ್ನನ್ನು ಸಂಪರ್ಕಿಸಿರುವುದಿಲ್ಲ. ಈಗಲೂ ಸಹ ಅರ್ಜಿದಾರರು ಅರ್ಜಿಯನ್ನು ಭೂಮಿ ಅಪ್ಲಿಕೇಷನ್ ಕಿಯೋಸ್ಕದಲ್ಲಿ ನೀಡಿದಲ್ಲಿ, ನಂತರ ಅರ್ಜಿದಾರರಿಗೆ ಅವರ ಅರ್ಜಿಯ ನಂಬರ್‌ಅನ್ನು ನೀಡಿ ನಿಯಮಾನುಸಾರ ಕ್ರಮ ಜರುಗಿಸಲಾಗುವುದೆಂದು ತಿಳಿಸಿದ ಮೇರೆಗೆ ಅದರಂತೆ ಅರ್ಜಿಯನ್ನು ಭೂಮಿ ಅಪ್ಲಿಕೇಷನ್ ಕಿಯೋಸ್ಕದಲ್ಲಿ ದಾಖಲಿಸಲಾಗಿರುತ್ತದೆ. ಸದರಿ ಅರ್ಜಿಗೆ ಎಸಿಕೆ ಸಂಖ್ಯೆ 7035 ಎಂದು ನಮೂದಿಸಲಾಗಿರುತ್ತದೆ. ಹಾಗೂ ಸದರಿ ಅರ್ಜಿಯಂತೆ ಕ್ರಮ ಜರುಗಿಸಲಾಗುವುದೆಂದು ಎದುರುದಾರರು ತಿಳಿಸಿರುತ್ತಾರೆ.

3. 1ನೇ ಎದುರುದಾರರಾದ ತಹಶೀಲ್ದಾರ್ ರವರ ದಿ:09/05/2014ರ ಪತ್ರದ ಪ್ರತಿಯನ್ನು ದೂರುದಾರರಿಗೆ ರವಾನಿಸಿ ಅವರಿಂದ ಪ್ರತ್ಯುತ್ತರವನ್ನು ಕರೆಯಲಾಗಿದ್ದು, ದೂರುದಾರರಿಂದ ಪ್ರತ್ಯುತ್ತರವನ್ನು ಪಡೆಯಲಾಗಿದ್ದು, ಸದರಿ ಆಕ್ಷೇಪಣೆಯಲ್ಲಿ ತಹಶೀಲ್ದಾರ್‌ರವರು ತಮ್ಮ ಪತ್ರದಲ್ಲಿ ದೂರುದಾರರು ತನ್ನನ್ನು ಸಂಪರ್ಕಿಸಿರಲಿಲ್ಲವೆಂದು ತಿಳಿಸಿರುವುದು ಸುಳ್ಳಿನಿಂದ ಕೂಡಿರುವ ವಿಷಯವಾಗಿರುತ್ತದೆ. ಕಿಯೋಸ್ಕ ಆಪರೇಟರ್‌ರವರು ತನ್ನ ಅರ್ಜಿಯನ್ನು ತೆಗೆದುಕೊಳ್ಳಲು ನಿರಾಕರಿಸಿದ ಕಾರಣ ದೂರುದಾರರು ತಮ್ಮ ಭರ್ತಿ ಮಾಡಿದ ಅರ್ಜಿಯನ್ನು ಫಾರಂ ನಂಬರ್ 19ರೊಡನೆ ತಹಶೀಲ್ದಾರ್‌ರವರಿಗೆ ನೊಂದಾಯಿತ ಅಂಚೆ ಮೂಲಕ ಕಳುಹಿಸಿದ್ದೇನೆಂದು, ಆದರೂ ಸಹ ತಹಶೀಲ್ದಾರ್‌ರವರು ತನ್ನ ಹೆಸರಲ್ಲಿ ಮ್ಯೂಟೇಷನ್ ಮಾಡದೇ ವಿನಾಕಾರಣ ಕಾಲಹರಣ ಮಾಡಿರುತ್ತಾರೆ. ಆದಕಾರಣ, ತಾನು ಮೇಲ್ಮನವಿಯನ್ನು ಅಸಿಸ್ಟೆಂಟ್ ಕಮೀಷನರ್ ರವರಿಗೆ ಸಲ್ಲಿಸಿರುತ್ತೇನೆಂದು, ಸದರಿ ಸಹಾಯಕ ಕಮೀಷನರ್‌ರವರು 1ನೇ ಎದುರುದಾರರಿಗೆ ಕ್ರಮ ಜರುಗಿಸುವಂತೆ ತಿಳಿಸಿದ್ದರು. 1ನೇ ಎದುರುದಾರರು ಸೂಕ್ತ ಕ್ರಮ ಜರುಗಿಸಿರುವುದಿಲ್ಲ. ಲೋಕಾಯುಕ್ತ ಸಂಸ್ಥೆಗೆ ಅರ್ಜಿಯನ್ನು ಸಲ್ಲಿಸಿದ ನಂತರ 1ನೇ ಎದುರುದಾರರು ತನಗೆ ಹಿಂಬರಹ ಸಂ:7035 ಅನ್ನು ಎರಡು ವರ್ಷಗಳ ನಂತರ ನೀಡಿರುತ್ತಾರೆ. 2ನೇ ಎದುರುದಾರರು ತನ್ನ ಆದೇಶದಂತೆ ಕ್ರಮ ಜರುಗಿಸಿರುತ್ತಾರೋ, ಇಲ್ಲವೋ ಎಂದು

ಪರಿಶೀಲಿಸಬೇಕಾಗಿತ್ತು, ಹಾಗೆ ಪರಿಶೀಲಿಸದೇ 2ನೇ ಎದುರುದಾರರು ಸಹ ನಿರ್ಲಕ್ಷತನ ತೋರಿಸಿರುತ್ತಾರೆಂದು ತಿಳಿಸಿರುತ್ತಾರೆ.

4. ದೂರಿನಂಶಗಳನ್ನು, ಎದುರುದಾರರ ಆಕ್ಷೇಪಣೆಯನ್ನು ಹಾಗೂ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಲ್ಲಿ ದೂರುದಾರರು ತಂದೆಯ ಮರಣಾನಂತರ ದೂರುದಾರರು ದಿ:16/07/2012 ರಂದು ಭೂಮಿ ಕಿಯೋಸ್ಕನಲ್ಲಿ ತಮಗೆ ಸಂಬಂಧಿಸಿದ ಸರ್ವೇ ನಂ:199/ಅ/2ಎ/2 ಗೆ ಸಂಬಂಧಿಸಿದಂತೆ ತಾನು ವಾರಸುದಾರನಾಗಿದ್ದು, ತನ್ನ ಹೆಸರನ್ನು ಹಕ್ಕು ದಾಖಲೆಯಲ್ಲಿ ಮ್ಯೂಟೇಷನ್ ಮಾಡಬೇಕೆಂದು ಕೋರಿ ಅರ್ಜಿ ಸಲ್ಲಿಸಿ, ಸದರಿ ಅರ್ಜಿಯನ್ನು ದೂರುದಾರರು ಭೂಮಿ ಕಿಯೋಸ್ಕನಲ್ಲಿ ಸಲ್ಲಿಸಲು ಹೋದಾಗ ಅಲ್ಲಿಯ ಆಪರೇಟರ್ ದೂರುದಾರರ ಅರ್ಜಿಯನ್ನು ತೆಗೆದುಕೊಳ್ಳಲು ನಿರಾಕರಿಸಿರುವುದು ಕಂಡು ಬಂದಿರುತ್ತದೆ. ಈ ಸಂಬಂಧ ದೂರುದಾರರು ಅರ್ಜಿಯನ್ನು ದಾಖಲೆಗಳೊಂದಿಗೆ ಸಲ್ಲಿಸಿರುವುದು ಕಂಡು ಬರುತ್ತದೆ. ದೂರುದಾರರು ಭೂಮಿ ಕಿಯೋಸ್ಕನಲ್ಲಿ ಅರ್ಜಿಯನ್ನು ಸಲ್ಲಿಸದ ಕಾರಣ, ಅವರ ಅರ್ಜಿಯನ್ನು ವಿಲೇ ಮಾಡಿರುವುದಾಗಿ 1ನೇ ಎದುರುದಾರರು ತಿಳಿಸಿರುವುದು ಕಂಡು ಬರುತ್ತದೆ. ಸದರಿ ತಹಶೀಲ್ದಾರ್, ಬೆಳಗಾವಿ ಇವರು ದೂರುದಾರರಿಗೆ ಪತ್ರದ ಮುಖೇನ ಅವರ ಅರ್ಜಿ ವಿಲೇಗೆ ಹಾಕಿರುವ ಬಗ್ಗೆ ತಿಳಿಸಿರುತ್ತಾರೆ (ಸದರಿ ಪತ್ರದ ಪ್ರತಿಯನ್ನು ಹಾಜರುಪಡಿಸಲಾಗಿದೆ). ಸದರಿ ತಹಶೀಲ್ದಾರ್‌ರವರು ಮಾಡಿರುವ ಆದೇಶದ ವಿರುದ್ಧ ದೂರುದಾರರು ಮೇಲ್ಮನವಿಯನ್ನು ಸಹಾಯಕ ಕಮೀಷನರ್, ಬೆಳಗಾವಿ ಇವರ ಮುಂದೆ ಸಲ್ಲಿಸಿದ್ದು, ಸದರಿ ಮೇಲ್ಮನವಿಯಲ್ಲಿ "ದೂರುದಾರರು ಅರ್ಜಿಯನ್ನು ನೇರವಾಗಿ ಭೂಮಿ ಕೇಂದ್ರದಲ್ಲಿ ಸ್ವೀಕರಿಸದೇ ಆವಕ ಶಾಖೆಯಲ್ಲಿ ತೆಗೆದುಕೊಂಡು ಅವರಿಗೆ ಮರು ಪತ್ರವನ್ನು ಬರೆದಿರುವುದು ತೀರಾ ವಿಷಾದನೀಯವಾಗಿರುತ್ತದೆ. ಆದ್ದರಿಂದ, ಅರ್ಜಿದಾರರ ಅರ್ಜಿಯನ್ನು ನೇರವಾಗಿ ಅರ್ಜಿ ಕಿಯೋಸ್ಕ ಶಾಖೆಯಲ್ಲಿ ಸ್ವೀಕರಿಸಿ ಅವರಿಗೆ ರಸೀದಿ ನೀಡುವಲ್ಲಿ ಕ್ರಮ ಕೈಗೊಳ್ಳಬೇಕು ಹಾಗೂ ಒಂದು ವೇಳೆ ಅರ್ಜಿದಾರರು ಅರ್ಜಿಯೊಂದಿಗೆ ಸರಿಯಾದ ದಾಖಲೆಗಳನ್ನು ಪೂರೈಸಲು ವಿಫಲರಾದರೆ ಅಂತಹ ಅರ್ಜಿಗಳನ್ನು ಅರ್ಜಿದಾರರಿಗೆ ಕಿಯೋಸ್ಕ ಶಾಖೆಯಿಂದಲೇ ಹಿಂದಕ್ಕೆ ಕೊಡುವ ವ್ಯವಸ್ಥೆಯನ್ನು ಮಾಡಿ ಅರ್ಜಿದಾರರಿಗೆ ಅರ್ಜಿಯೊಂದಿಗೆ ಅಗತ್ಯ ದಾಖಲೆಗಳನ್ನು ಲಗತ್ತಿಸಿ ಮರು ಅರ್ಜಿ ಸಲ್ಲಿಸಲು ತಿಳುವಳಿಕೆ ಹೇಳಬೇಕು ಎಂದು ಈ ಮೂಲಕ ಸೂಚಿಸಿದೆ" ಎಂದು ಆದೇಶಿಸಿರುವುದು ಉಪವಿಭಾಗಾಧಿಕಾರಿಗಳು ದಿ:12/09/2013 ರಂದು ತಹಶೀಲ್ದಾರ್, ಬೆಳಗಾವಿ ಇವರಿಗೆ ಬರೆದಿರುವ ಪತ್ರದ ಪ್ರತಿಯಿಂದ ಕಂಡು ಬರುತ್ತದೆ (ಸದರಿ ಪತ್ರದ ಪ್ರತಿಯನ್ನು ಹಾಜರುಪಡಿಸಲಾಗಿದೆ). ದಿ:12/09/2013ರ ಪತ್ರದ ನಂತರ 1ನೇ

ಎದುರುದಾರರು ಈ ಬಗ್ಗೆ ಯಾವುದೇ ಕ್ರಮ ಜರುಗಿಸದೇ ಇರುವುದು ದಾಖಲೆಗಳಿಂದ ಕಂಡು ಬರುವುದಿಲ್ಲ.

5. 1ನೇ ಎದುರುದಾರರಿಗೆ ಸಹಾಯಕ ಕಮೀಷನರ್‌ರವರು ಹೊರಡಿಸಿದ ಆದೇಶದ ವಿರುದ್ಧ ಏನು ಕ್ರಮ ಜರುಗಿಸಲಾಗಿರುತ್ತದೆ. ಜರುಗಿಸಿದಲ್ಲಿ ಸರ್ವೇ ನಂಬರ್ 199/ಅ/2ಎ/2 ಗೆ ಸಂಬಂಧಿಸಿದಂತೆ ಯಾವ ರೀತಿ ಹಕ್ಕು ಬದಲಾವಣೆ ಮಾಡಲಾಗಿದೆ ಎಂಬುದರ ಬಗ್ಗೆ ವರದಿಯನ್ನು 1ನೇ ಎದುರುದಾರರಾದ ತಹಶೀಲ್ದಾರ್‌ರವರಿಂದ ಪಡೆಯಲಾಗಿದ್ದು, 1ನೇ ಎದುರುದಾರರು ತಮ್ಮ ದಿ:04/01/2017ರ ಪತ್ರದಲ್ಲಿ ಅರ್ಜಿದಾರರಾದ ಶ್ರೀ ಪ್ರೇಮಚಂದ್ ಮೋತಿಚಂದ್ ಲೇಂಗ್ಡೆ ಇವರಿಗೆ ಮತ್ತೊಮ್ಮೆ ಅರ್ಜಿಯನ್ನು ತಹಶೀಲ್ದಾರ್, ಬೆಳಗಾವಿ ಇವರಿಗೆ ನೀಡಿದಲ್ಲಿ ಕಾನೂನು ಪ್ರಕಾರ ಕ್ರಮ ಜರುಗಿಸಲು ಸಾಧ್ಯವಾಗುತ್ತದೆ ಎಂದು ತಿಳಿಸಿರುವುದು ಕಂಡು ಬರುತ್ತದೆ (ಸದರಿ ಪತ್ರದ ಪ್ರತಿಯನ್ನು ಹಾಜರುಪಡಿಸಲಾಗಿದೆ).

6. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ದೂರುದಾರರ ತೊಂದರೆ ನಿವಾರಿಸುವ ನಿಟ್ಟಿನಲ್ಲಿ ದೂರುದಾರರಿಂದ ಭೂಮಿ ಕಿಯೋಸ್ಕನಲ್ಲಿ ಅರ್ಜಿಯನ್ನು ಪಡೆದು ಸರ್ವೇ ನಂ.199/ಅ/2ಎ/2 ಸಂಬಂಧಿಸಿದಂತೆ ಮ್ಯೂಟೇಷನ್ ಮಾಡುವ ನಿಟ್ಟಿನಲ್ಲಿ ಕಾನೂನು ರೀತ್ಯ ಸೂಕ್ತ ಕ್ರಮ ಜರುಗಿಸುವಂತೆ ಸರ್ಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.** ಈ ಬಗ್ಗೆ **ಎರಡು ತಿಂಗಳೊಳಗೆ** ಕ್ರಮ ಕೈಗೊಂಡು, ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ **ಒಂದು ತಿಂಗಳಯೊಳಗೆ** ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

N. Anand 1/4

**(ನ್ಯಾಯಮೂರ್ತಿ ಎನ್.ಆನಂದ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ,**
**ಬೆಂಗಳೂರು.**

3/3/17